ದಿನಾಂಕ: ಫೆಬ್ರವರಿ 15, 2014

# ದುಸ್ವಪ್ನ ಅಂತ್ಯವಾಗಿದೆ

-ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಕೊನೆಗೂ ದುಸ್ವಪ್ನ ಅಂತ್ಯವಾಗಿದೆ. ದೆಹಲಿ ಕಂಡ ಅಧ್ವಾನಕರ ರಾಜ್ಯ ಸರ್ಕಾರ ರಾಜಿನಾಮೆ ನೀಡಿದೆ. ಎಎಪಿ ಪಕ್ಷದ ಸರ್ಕಾರ ಲೆಫ್ಟಿನೆಂಟ್ ಗವರ್ನರ್‌ಗೆ ರಾಜಿನಾಮೆ ಒಪ್ಪಿಸಲು ನಿರ್ಧರಿಸಿದೆ. ಕಳೆದ 49 ದಿವಸಗಳೂ ನಾವು ಅಸಾಂಪ್ರದಾಯಿಕ ಸರ್ಕಾರಕ್ಕೆ ಸಾಕ್ಷಿಯಾಗಿದ್ದೆವು. ಉದ್ದೇಶರಹಿತ ಹಾಗೂ ತತ್ವರಹಿತ ಸರ್ಕಾರ ಇದಾಗಿತ್ತು. ಕೇವಲ ಪ್ರಜೆಗಳನ್ನು ಮತ್ತು ಪ್ರಜಾನಾಯಕರನ್ನು ಓಲೈಸುವ ಸರ್ಕಾರವಾಗಿತ್ತು.

ಜಾಣತನದ ರಾಜಕಾರಣ ಆದರೆ ಆಡಳಿತ ನಡೆಸುವ ಸರ್ಕಾರವಲ್ಲ- ದೆಹಲಿಯ ಎಎಪಿ ಸರ್ಕಾರ ಈ ಉದ್ದೇಶವನ್ನು ಹೊಂದಿತ್ತು. ಬಹುಮತವಿಲ್ಲದ ಸರ್ಕಾರ ಇದಾಗಿತ್ತು. ಅದರ ಬಳಿ ಕೇವಲ 28 ಶಾಸಕರಿದ್ದರು. ಭಾಜಪ ಅಧಿಕ ಶಾಸಕರನ್ನು ಹೊಂದಿತ್ತು. ಬಹುಮತ ಸಾಬೀತು ಪಡಿಸಲು ನಿಸ್ಸಂಕೋಚವಾಗಿ ಕಾಂಗ್ರೆಸ್ ಬೆಂಬಲ ಪಡೆಯುವಲ್ಲಿ ಎಎಪಿಗೆ ಯಾವುದೇ ಅಳುಕು ಕಾಣಲಿಲ್ಲ. ಅವರಲ್ಲಿ ಹಲವು ಶಾಸಕರಿಗೆ ಅನುಭವ ಸಾಲದು, ಪರಿಪಕ್ವತೆ ಸಾಲದು. ಕೆಲವೊಮ್ಮೆ ಅವರು ಅವಲಕ್ಷಣ ಮಾಡಿಕೊಂಡಿದ್ದು ಹೌದು. ಸಂಘರ್ಷದ ಮನೋಭಾವ ಹೊಂದಿದ ಅವರು ಆಳ್ವಿಕೆಯ ಯಾವುದೇ ಲಕ್ಷಣ ಪ್ರದರ್ಶಿಸಲಿಲ್ಲ.

ದೆಹಲಿಯಲ್ಲಿ ಕುಡಿಯುವ ನೀರಿನ ಜಾಲ ವಿಸ್ತರಿಸುವ ನಿರ್ಧಾರವನ್ನು ಎಎಪಿ ಸರ್ಕಾರ ಮಾಡಿತ್ತೆ? ದೆಹಲಿಯಲ್ಲಿ ಆರೋಗ್ಯರಕ್ಷಣೆ ಸೌಕರ್ಯವೃದ್ಧಿಗೆ ಯೋಜನೆಯನ್ನು ಗಂಭೀರವಾಗಿ ರೂಪಿಸಿದ್ದರೆ? ಹೊಸ ಶಾಲೆಗಳು ಮತ್ತು ಕಾಲೇಜುಗಳನ್ನು ಆರಂಭಿಸುವ ಆಲೋಚನೆ ಹೊಂದಿದ್ದರೆ? ತಾಂತ್ರಿಕ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿ ಹೆಚ್ಚಿಸುವ ಆಲೋಚನೆ ಹೊಂದಿದ್ದರೆ? ದೆಹಲಿ ಮೆಟ್ರೋ ಸಂಪರ್ಕ ಹೆಚ್ಚಿಸಲು, ಎರಡನೆ ಹಂತ ಆರಂಭಿಸುವ ವಿಷಯ ಏನಾಯಿತು? ಹೆಚ್ಚಿನ ಮೇಲುಸೇತುವೆ ಮತ್ತು ಉತ್ತಮ ಗುಣಮಟ್ಟದ ಲೋಕೋಪಯೋಗಿ ಇಲಾಖೆ ರಸ್ತೆಗಳ ವಿಚಾರ ಅವರ ಮನಸ್ಸಿಗೆ ಬಂದಿತ್ತೆ? ಬೃಹತ್ ಮಹಾನಗರಗಳಲ್ಲಿ ವಾಸಿಸುವವರ ಜೀವನ ಮಟ್ಟ ಸುಧಾರಣೆಗೆ ಈ ಎಲ್ಲಾ ವಿಚಾರಗಳು ಪ್ರಾಮುಖ್ಯತೆ ಹೊಂದಿವೆ. ಇವು ಆಡಳಿತದ  ಪ್ರಮುಖ ವಿಚಾರಗಳು. ಆದರೂ 49 ದಿವಸಗಳ ಸರ್ಕಾರ ಈ ವಿಚಾರಗಳಲ್ಲಿ ನಿರ್ಲಿಪ್ತತೆ ತೋರಿದೆ.

ಕೇವಲ ಸಂಘರ್ಷದ ವಿಚಾರಗಳಲ್ಲಿ ಅದರ ಗಮನ ನೆಟ್ಟಿತ್ತು. ಗೃಹ ಸಚಿವರು, ಲೆಫ್ಟಿನೆಂಟ್ ಗವರ್ನರ್, ಪೋಲೀಸ್ ಆಯುಕ್ತರು ಹಾಗೂ ಆಫ್ರಿಕಾದ ಮಹಿಳೆಯರ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಸುಳ್ಳು ಆರೋಪ ಹೊರೆಸುವುದು, ಆ ಮೂಲಕ ಕಾಲ್ಪನಿಕ ಶತ್ರುಗಳನ್ನು ಸೃಷ್ಟಿಸಿ, ಅವರ ವಿರುದ್ಧ ಅಪಪ್ರಚಾರ ನಡೆಸುವ ದೃಷ್ಟಿಕೋನ ಅವರದ್ದಾಗಿತ್ತು. ಅವರ ನಾಯಕರು ಮಾತ್ರ ಪ್ರಾಮಾಣಿಕರಾಗಿದ್ದು, ಅನ್ಯರು ರಾಜಿ ಮಾಡಕೊಂಡವರು ಎಂದು ಆಲೋಚಿಸುವ ಹುಂಬತನ ಅವರಲ್ಲಿದೆ. ಆಡಳಿತಾವಧಿಯ ಪ್ರತಿಯೊಂದು ದಿನವು ಅದು ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು. ಸಚಿವಾಲಯದಲ್ಲಿದ್ದ ಅದರ ಸಚಿವರು ಪಿಂಗಾಣಿ ಅಂಗಡಿಗೆ ಗೂಳಿ ನುಗ್ಗಿದಂತೆ ವರ್ತಿಸುತ್ತಿದ್ದರು. ಬೀದಿ ರಂಪಮಾಡುವಲ್ಲಿ ಅವರೆಲ್ಲ ನಿಸ್ಸೀಮರು. ಆದ್ದರಿಂದಲೇ ನಿರ್ಗಮಿಸುವ

ಮಾರ್ಗವನ್ನು ಅದು ಆಯ್ಕೆ ಮಾಡಿಕೊಳ್ಳಬೇಕಾಯಿತು. ಕೊನೆ ದಿನದವರೆಗೂ ಜನಲೋಕಪಾಲ್ ಮಸೂದೆ ವಿಚಾರವನ್ನು ಗೌಪ್ಯವಾಗಿ ಇಡಲಾಗಿತ್ತು. ಕೇಂದ್ರ ಶಾಸನದ ಹೋಲಿಕೆಯಲ್ಲಿ ಅಷ್ಟೇನು ಭಿನ್ನವಲ್ಲದ ಅವರ ಲೋಕಪಾಲ್ ಮಸೂದೆ ಕ್ರಾಂತಿಕಾರಿ ಅಂಶಗಳನ್ನು ಹೊಂದಿದೆ ಎಂಬ ಸುಳ್ಳು ಪ್ರಚಾರವನ್ನು ಮಾಡಿದ್ದಾರೆ. ರಾಜಿನಾಮೆ ನೀಡಲು ನೆಪ ಒಂದು ಬೇಕಾದ್ದರಿಂದ ಶಾಸನ ರೂಪಿಸುವ ಸಾಂಪ್ರದಾಯಿಕ ಪ್ರಕ್ರಿಯೆಯನ್ನು ಧಿಕ್ಕರಿಸುವ ನಿರ್ಣಯವನ್ನು ತೆಗೆದುಕೊಂಡಿತು.

ಎಎಪಿ ಸರ್ಕಾರ ನಿರ್ಗಮಿಸಿದೆ. ಪರ್ಯಾಯ ರಾಜಕೀಯ ವ್ಯವಸ್ಥೆ ಬಯಸಿದವರ ನಿರೀಕ್ಷೆ ನುಚ್ಚುನೂರಾಗಿದೆ. ಪ್ರಜೆಗಳ ಭಾವನೆ ಕೆರಳಿಸಿ ಜನಬೆಂಬಲ ಗಳಿಸುವ, ಜನಪ್ರಿಯತೆ ಪಡೆಯುವ, ಹುಸಿನುಡಿದು ಆಳ್ವಿಕೆ ನೀಡದ ಪರ್ಯಾಯ ರಾಜಕಾರಣವನ್ನು ಅವರು ಮಾಡಿದ್ದಾರೆ. ದೇವರ ಕೃಪೆ, ದುಸ್ವಪ್ನ ಅಂತ್ಯವಾಗಿದೆ.

✶✶✶✶✶